# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಎಸ್.ನರಸಿಂಹಮೂರ್ತಿ | ಫ್ರಾಸಾಃ | 13 |
| **ತಂದೆಯ ಹೆಸರುಃ** | ಜಿ.ಆರ್. ಶಿವಪ್ಪ | ಚಾಸಾಃ | 17 |
| **ವಯಸ್ಸುಃ** | 37 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 24.07.2024 |
| **ಉದ್ಯೋಗಃ** | ವ್ಯವಸಾಯ | | |
| **ವಾಸ ಸ್ಥಳಃ** | ಗಡಿಮಿಂಚೇನಹಳ್ಳಿ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು. | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಮೃತ ಸರಸ್ವತಮ್ಮ ನನ್ನ ತಾಯಿ. ನನ್ನ ತಾಯಿ 2019 ರಲ್ಲಿ ನಿಧನ ಹೊಂದಿರುತ್ತಾರೆ. ಚಿಂತಾಮಣಿಯಲ್ಲಿರುವ ನಾರಸಿಂಹಪೇಟೆಯ ಗಂಗಮ್ಮ ದೇವಸ್ಥಾನದಲ್ಲಿ ವಿಷದ ಪ್ರಸಾದವನ್ನು ನನ್ನ ತಾಯಿ ಸೇವಿಸಿ ನಿಧನ ಹೊಂದಿರುತ್ತಾರೆ. ಶ್ರೀಗೌರಿ ಫ್ರಾ.ಸಾ.11 ನನ್ನ ತಂಗಿಯಾಗಬೇಕು. ಫ್ರಾ.ಸಾ.11 ಮತ್ತು ನನ್ನ ತಾಯಿ ಗಂಗಮ್ಮ ದೇವಸ್ಥಾನಕ್ಕೆ

ಹೋಗಿದ್ದರು. ಅಲ್ಲಿ ಅಮರಾವತಿ ಮತ್ತು ಪಾರ್ವತಮ್ಮ ಎನ್ನುವವರು ಪ್ರಸಾದವನ್ನು ನನ್ನ ತಂಗಿಗೆ ಮತ್ತು ನನ್ನ ತಾಯಿಗೆ ಕೊಟ್ಟಿದ್ದರು. ಅದನ್ನು ಮನೆಗೆ ತೆಗೆದುಕೊಂಡು ಬಂದಿದ್ದರು. ನನ್ನ ತಂಗಿ ಪ್ರಸಾದವನ್ನು ಸ್ವೀಕರಿಸಲಿಲ್ಲ, ಆದರೆ ನಮ್ಮ ತಾಯಿ ಸದರಿ ಪ್ರಸಾದವನ್ನು ಸೇವಿಸಿರುತ್ತಾರೆ. ನನ್ನ ತಾಯಿ ಪ್ರಸಾದವನ್ನು ಸೇವಿಸಿದ ನಂತರ ಅವರಿಗೆ ರಾತ್ರಿ ವಾಂತಿ ಮತ್ತು ಭೇಧಿ ಶುರುವಾಯಿತು. ನಂತರ ನನ್ನ ತಾಯಿಯನ್ನು ಬೆಳಿಗ್ಗೆ ಸುಮ ನರ್ಸಿಂಗ್ ಹೋಮ್ ಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಇಲ್ಲಿ ಆಗುವುದಿಲ್ಲ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ನಂತರ ನನ್ನ ತಾಯಿಯನ್ನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ಅಲ್ಲಿ ಸಹ ವೈದ್ಯರು ಇಲ್ಲಿ ಆಗುವುದಿಲ್ಲ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ನಂತರ ನಾವು ನನ್ನ ತಾಯಿಯನ್ನು ಕೋಲಾರ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಸದರಿ ಆಸ್ಪತ್ರೆಯಲ್ಲಿ ದಿನಾಂಕಃ26.01.2019 ರಂದು ನನ್ನ ತಾಯಿ ನಿಧನ ಹೊಂದಿರುತ್ತಾರೆ.

2) ಶವಗಾರದ ಹತ್ತಿರ ಪೋಲಿಸರು ಬಂದಿದ್ದರು. ಆ ಸಮಯದಲ್ಲಿ ನಾನು ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ತಾಯಿಯ ಸಾವಿಗೆ 1 ಮತ್ತು 2 ನೇ ಆರೋಪಿ ಕಾರಣರಾಗಿದ್ದಾರೆ. ಲೋಕೇಶ್ ಮತ್ತು ಲಕ್ಷ್ಮೀರವರ ಮಧ್ಯೆ ಅನೈತಿಕ ಸಂಬಂಧ ಇತ್ತು. ಸದರಿ ಲೋಕೇಶ್ ಮತ್ತು ಲಕ್ಷ್ಮೀ ಸೇರಿಕೊಂಡು ವಿಷದ ಪ್ರಸಾದವನ್ನು

ಪ್ರಾ.ಸಾ.11 ರವರಿಗೆ ತಿನ್ನಿಸಬೇಕೆಂಬ ಉದ್ದೇಶದಿಂದ ಅಮರಾವತಿ ಮತ್ತು ಪಾರ್ವತಮ್ಮರವರ ಮುಖಾಂತರ ಪ್ರಸಾದವನ್ನು ನನ್ನ ತಂಗಿ ಮತ್ತು ನನ್ನ ತಾಯಿಗೆ ನೀಡಿದ್ದರು. ಸದರಿ ಪ್ರಸಾದವು ರವೆ ಪಾಯಸವಾಗಿದ್ದು, ಪೇಪರ್ ಕಪ್ ನಲ್ಲಿ ಕೊಡಲಾಗಿತ್ತು. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು 1 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದೇ ತರಹದ ಪೇಪರ್ ಕಪ್ ನಲ್ಲಿ ವಿಷದ ಪ್ರಸಾದವನ್ನು ನೀಡಿದ್ದರು ಎಂದು ಹೇಳುತ್ತಾರೆ. ಪ್ರಕರಣದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿತರ ಪರ ಶ್ರೀ.ಎಸ್.ಆರ್.ಬಿ. ವಕೀಲರಿಂದಃ</u>**

3) ನನ್ನ ತಾಯಿಗೆ ಪ್ರಸಾದ ಸೇವಿಸಿದ ನಂತರ ವಾಂತಿ ಭೇದಿ ಉಂಟಾಗಿದೆ ಎಂದು ನನ್ನ ತಂಗಿ ನನ್ನ ಮಾವನಿಗೆ ತಿಳಿಸಿದ ನಂತರ ನನಗೆ ಗೊತ್ತಾಯಿತು. ದಿನಾಂಕಃ25.01.2019 ರಂದು ನನಗೆ ಪೋನ್ ಬಂದಿತ್ತು. ನಾನು ದಿನಾಂಕಃ26.01.2019 ರಂದು ಬೆಳಿಗ್ಗೆ 6.00 ಗಂಟೆಗೆ ಚಿಂತಾಮಣಿಗೆ ಬಂದೆನು. ಬೆಳಿಗ್ಗೆ 7.00 ಗಂಟೆಗೆ ಸುಮ ನರ್ಸಿಂಗ್ ಹೋಮ್ ಗೆ ಕರೆದುಕೊಂಡು ಹೋದೆವು. ಅಮರಾವತಿ ಮತ್ತು ಪಾರ್ವತಮ್ಮರವರು ನಮ್ಮ ತಾಯಿಗೆ ವಿಷದ ಪ್ರಸಾದ ನೀಡಿದ್ದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

4) ಪೋಲಿಸರ ಮುಂದೆ ಯಾರೋ ಒಬ್ಬ ಹೆಂಗಸು ನನ್ನ ತಂಗಿಗೆ ಮತ್ತು ನನ್ನ

ತಾಯಿಗೆ ವಿಷದ ಪ್ರಸಾದವನ್ನು ನೀಡಿದ್ದರು ಎಂದು ಹೇಳಿದ್ದೇನೆಂದರೆ ಸರಿ. ಕೋಲಾರದ ಆಸ್ಪತ್ರೆಯ ಶವಗಾರದ ಹತ್ತಿರ ಪಾರ್ವತಿ ಮತ್ತು ಅಮರಾವತಿ ಮೇರೆ ಅವರು ವಿಷದ ಪ್ರಸಾದ ನೀಡಿದರು ಎಂದು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು 2 ನೇ ಆರೋಪಿ ರವರ ಮಧ್ಯೆ ಅಕ್ರಮ ಸಂಬಂಧ ಇತ್ತು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು 1 ನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಯ ಸಾವಿಗೆ 1 ಮತ್ತು 2 ನೇ ಆರೋಪಿ ಕಾರಣರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿತರಿಗೂ ಈ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀಮತಿ ಎಸ್.ಎನ್. ವಕೀಲರು 2 ಮತ್ತು 4 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪರ ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ24.07.2024 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.